## ಮಲೇಶ್ಯನ್ ಪಾಮೆಣ್ಣೆ ದರ ಹೆಚ್ಚಳ

ಮಲೇಶ್ಯನ್ ಪಾಮೆಣ್ಣೆ ಬೋರ್ಡ್ ನ ಮಲೇಶ್ಯದ ಪಾಮೆಣ್ಣೆ ದಾಸ್ತಾನು ಹಿಂದಿನ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆಯೆಂದು ವರದಿಯಿಂದ ಪಾಮೆಣ್ಣೆ ಫ್ಯೂಚರ್ ದರ 1.46 ಶೇಕಡಾ (64 ರಿಂಗಿಟ್ಸ್) ಹೆಚ್ಚಳವಾಗಿದೆ. ಹಿಂದಿನ ವಾರ ದಾಖಲೆ ದರ ಹೆಚ್ಚಳದೊಂದಿಗೆ ಅಂತ್ಯವಾಗಿತ್ತು.

## ಭಾರತೀಯ ಸಕ್ಕರೆ ಕಾರ್ಖಾನೆಗಳಿಂದ 5.11 ಮಿಲಿಯನ್ ಟನ್ ಸಕ್ಕರೆ ರಫ್ತು

ಈ ವರ್ಷದ 7 ತಿಂಗಳಲ್ಲಿ ಈ ವರೆಗೆ ಭಾರತೀಯ ಸಕ್ಕರೆ ಕಾರ್ಖಾನೆಗಳು 5.11 ಮಿಲಿಯನ್ ಟನ್ ಸಕ್ಕರೆ ಸರ್ಕಾರಿ ನೀತಿಯನ್ವಯ ರಫ್ತು ಮಾಡಿವೆಯೆನ್ನಲಾಗಿದೆ. ಒಟ್ಟು 6 ಮಿಲಿಯನ್ ಟನ್ ಸಕ್ಕರೆ ರಫ್ತು ಕರಾರು ಮಾಡುವಲ್ಲಿ ಭಾರತೀಯ ಸಕ್ಕರೆ ಕಾರ್ಖಾನೆಗಳು ಯಶಸ್ವಿಯಾಗಿವೆಯೆಂದು ಅಖಿಲ ಭಾರತೀಯ ಸಕ್ಕರೆ ವ್ಯಾಪಾರಿ ಅಸೋಸಿಯೇಶನ್ ಹೇಳಿದೆ. ರಫ್ತು ಮಾಡಿದ ಸಕ್ಕರೆ ಮೌಲ್ಯ $ 2.5 ಬಿಲಿಯನ್ ಅಥವಾ ರೂ. 18,600 ಕೋಟಿಗಳನ್ನೆಲಾಗಿದೆ.

## ಬೇಳೆ ತಯಾರಕರಿಂದ ಉತ್ತಮ ಬೇಡಿಕೆ, ಬೇಳೆಕಾಳು ದರ ಉತ್ತಮ

ಬೇಳೆ ತಯಾರಕ ಮಿಲ್ ಗಳಿಂದ ಉತ್ತಮ ಬೇಡಿಕೆಯ ಹಿನ್ನಲೆಯಲ್ಲಿ ಬೇಳೆಕಾಳು ದರ ಉತ್ತಮಗೊಂಡಿದೆ. ಬೇಳೆಕಾಳು ಬಿತ್ತನೆ ಈ ವರ್ಷ ಹಿಂದಿನ ವರ್ಷಕ್ಕಿಂತ 1.54 ಶೇಕಡಾ ಹೆಚ್ಚಳಗೊಂಡ 126.98 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 125.06 ಲಕ್ಷ ಹೆಕ್ಟೇರ್ ನಲ್ಲಿ ಬಿತ್ತನೆಯಾಗಿತ್ತು. ಹಿಂದಿನ ವರ್ಷದ 45.18 ಲಕ್ಷ ಹೆಕ್ಟೇರ್ ಬದಲಾಗಿ ಈ ವರ್ಷ ಆಗಸ್ಟ್ 13 ರ ತನಕ 46.88 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದೆಯೆನ್ನಲಾಗಿದೆ.